ಆ) ಉಡುಪಿ ಜಿಲ್ಲೆಯಲ್ಲಿ ಎಷ್ಟು ಪಂಚಾಯತಿಗಳು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದಿವೆ;

ಇ) ಕಾಪು ಮತ ಕ್ಷೇತ್ರದಲ್ಲಿ ಒಟ್ಟು ಎಷ್ಟು ಪಂಚಾಯತಿಗಳು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬರುತ್ತದೆ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ರಾಜ್ಯದ ಎಲ್ಲಾ ಜಿಲ್ಲೆಗಳ 5628 ಗ್ರಾಮ ಪಂಚಾಯತಿಗಳಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸೌಲಭ್ಯಗಳನ್ನು ಒದಗಿಸಲಾಗಿದೆ.

ಆ) ಉಡುಪಿ ಜಿಲ್ಲೆಯ ಎಲ್ಲಾ 146 ಗ್ರಾಮ ಪಂಚಾಯತಿಗಳಿಗೆ ಉದ್ಯೋಗ ಖಾತರಿ ಯೋಜನೆಯಡಿ ಸೌಲಭ್ಯಗಳನ್ನು ಒದಗಿಸಲಾಗಿದೆ.

ಇ) ಉದ್ಯೋಗ ಖಾತರಿ ಯೋಜನೆಯಡಿ ಕಾಪು ಮತ ಕ್ಷೇತ್ರದಲ್ಲಿ ಒಟ್ಟು 29 ಗ್ರಾಮ ಪಂಚಾಯತಿಗಳು ಬರುತ್ತದೆ.

ಹಾಸನ ಜಿಲ್ಲೆಯಲ್ಲಿರುವ ಹಾಲು ಉತ್ಪಾದಕರ ಸಂಘಗಳ ಬಗ್ಗೆ

307 (03) ಶ್ರೀ ಮಂಜು.ಎ (ಅರಕಲಗೂಡು) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಒಟ್ಟು ಹಾಲು ಉತ್ಪಾದಕರ ಸಂಘಗಳೆಷ್ಟು;

ಆ) ಅರಕಲಗೂಡು ಮತಕ್ಷೇತ್ರದಲ್ಲಿ ಒಟ್ಟು ಎಷ್ಟು ಹಾಲು ಉತ್ಪಾದಕರ ಸಂಘಗಳಿವೆ;

ಇ) ಹಾಲು ಉತ್ಪಾದಕರ ಸಂಘಗಳು ಹೊಸದಾಗಿ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ ಅರಕಲಗೂಡು ಕ್ಷೇತ್ರದಲ್ಲಿ ಹೊಸ ಸಂಘಗಳ ವಿವರ ನೀಡುವುದು;

ಈ) ಇನ್ನು ಎಷ್ಟು ಹಾಲು ಉತ್ಪಾದಕರ ಹೊಸ ಸಂಘಗಳು ಪ್ರಾರಂಭಿಸಲಾಗುವುದು;

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಹಾಸನ ಜಿಲ್ಲೆಯಲ್ಲಿ ಜನವರಿ 2010ರ ಅಂತ್ಯಕ್ಕೆ ಒಟ್ಟು 903 ಹಾಲು ಉತ್ಪಾದಕರ ಸಂಘಗಳಿವೆ.

ಆ) ಅರಕಲಗೂಡು ಮತಕ್ಷೇತ್ರದಲ್ಲಿ ಜನವರಿ 2010ರ ಅಂತ್ಯಕ್ಕೆ ಒಟ್ಟು 101 ಹಾಲು ಉತ್ಪಾದಕರ ಸಂಘಗಳಿವೆ.

ಇ) ಇದೆ. 2009–10ನೇ ಸಾಲಿನಲ್ಲಿ ಅರಕಲಗೂಡು ಕ್ಷೇತ್ರದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಹೊಸದಾಗಿ 13 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರಾರಂಭಿಸಲಾಗಿದೆ;

1) ನರಸಿನಕುಪ್ಪೆ, 2) ಹೆಬ್ಬಾಳೆ, 3) ಶಿಣವಿನಕುಪ್ಪೆ, 4) ಮುತ್ತಿಗೆ, 5) ಕೊಳ್ಳಂಗಿ, 6) ಹೊಳಲಗೋಡು, 7) ಬಿಸಲೇನಹಳ್ಳಿ, 8) ಹೊನಗನಹಳ್ಳಿ, 9) ಕಾಳೇನಹಳ್ಳಿ, 10) ಆನಂದೂರು, 11) ವಡ್ಡರಹಳ್ಳಿ, 12) ಹನಿಹಾಳ್, 13) ಕೇರಳಾಪುರ.

ಈ) 2010–11ನೇ ಸಾಲಿನಲ್ಲಿ ಹಾಸನದ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಹೊಸದಾಗಿ 100 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರಾರಂಭಿಸುವ ಉದ್ದೇಶವಿರುತ್ತದೆ.

308 (704) ಶ್ರೀ ಮಂಜುನಾಥ್ ಹೆಚ್.ಪಿ (ಹುಣಸೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಸಂಶೋಧನೆ ಮತ್ತು ಮೌಲ್ಯಮಾಪನ ಮಧ್ಯ ಪ್ರವೇಶಿಕೆಯಡಿ "ಕಲಿಕಾ ಯತ್ನ" ಎಂಬ ನೂತನ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಸರ್ಕಾರಿ ಶಾಲೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಾರ್ಯಕ್ರಮ ಅನುಷ್ಠಾನಕ್ಕಾಗಿ ಪ್ರಜಾ ಯತ್ನ ಎಂಬ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆ (ಎನ್.ಜಿ.ಓ)ಗೆ ಕಾರ್ಯಭಾರ ವಹಿಸಲಾಗಿದ್ದು, ಈ ಸಂಸ್ಥೆಗೆ ಯಾವ ಆಧಾರದ ಮೇಲೆ ಕಾರ್ಯ ವಹಿಸಲಾಗಿದೆ;

ಇ) ಕಲಿಕಾ ಯತ್ನ ಕಾರ್ಯಕ್ರಮವನ್ನು ರಾಜ್ಯದಲ್ಲಿ ಯಾವ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ;